# ಅಖಿಲ ಭಾರತ ಅಂಚೆ  ಜೀವ ವಿಮೆ ಹಾಗು ಗ್ರಾಮಿಣ ಅಂಚೆ ಜೀವ ವಿಮೆ ಪ್ರಶಸ್ತಿಗಳ ನೀಡಿಕೆ

**ಬೆಂಗಳೂರು :ನವೆಂಬರ್ ,08,2005**

ಶ್ರೀಮತಿ ಜೋತ್ಸ್ನಾ  ದಾಯಿಶ್, ಸದಸ್ಯರು (ಡಿ) ಅಂಚೆ ಸೇವೆಗಳ ಮಂಡಳಿ, ಇವರು 2003–04 ರ ಸಾಲಿನ ಅಖಿಲ ಭಾರತ ಅಂಚೆ  ಜೀವ ವಿಮೆ ಹಾಗು ಗ್ರಾಮೀಣ ಅಂಚೆ ಜೀವ ವಿಮೆ ಪ್ರಶಸ್ತಿಗಳನ್ನು ನಗರದಲ್ಲಿಂದು ನಡೆದ ಸಮಾರಂಭದಲ್ಲಿ  ನೀಡಿದರು . ಅಭಿವೃದ್ಧಿ ಅಧಿಕಾರಿಗಳ ವರ್ಗದಲ್ಲಿ ತಮಿಳುನಾಡಿನ ಶ್ರೀ ಆರ್. ವೆಂಕಟೇಶನ್ ಮೊದಲ ಬಹುಮಾನ ಪಡೆದಿದ್ದು , ರಾಜ್ಯದವರಾದ ಶ್ರೀ ಬಿ. ಸುಕುಮಾರ ನಾಯಕ್ ಎರಡನೇಯ ಸ್ಥಾನ ಹಾಗು ಗುಜರಾತಿನ  ಶ್ರೀ ಬಿ ಬಿ. ಜೋಶಿಯವರು  ಮೂರನೇಯ ಸ್ಥಾನವನ್ನು ಪಡೆದಿದ್ದಾರೆ . ಇವರುಗಳು ಕ್ರಮವಾಗಿ ,  26.8 ಕೋಟಿ ರೂಪಾಯಿ,(ಕೋ.ರೂ), 16.2 ಕೋ. ರೂ.ಹಾಗು 15.7 ಕೋಟಿ ರೂಪಾಯಿಗಳ ವ್ಯವಹಾರವನ್ನು  ಮಾಡಿದ್ದಾರೆ . ಕ್ಷೇತ್ರ ಅಧಿಕಾರಿಗಳ ವರ್ಗದಲ್ಲಿ  ಶ್ರೀ ಓ. ಪಿ. ಸೈನಿ ಮೊದಲ ಸ್ಥಾನ ,ಶ್ರೀ ಆರ್. ಎನ್. ಪಾರೇಖ್ ದ್ವಿತಿಯ ಸ್ಥಾನ ಹಾಗೂ ಶ್ರೀ ಭಗವತಿ ಪ್ರಸಾದ್ ಮೂರನೇಯ ಸ್ಥಾನವನ್ನು ಪಡೆದಿದ್ದಾರೆ . ಉಪ ಪೋಸ್ಟ್ ಮಾಸ್ಟರ್ ವರ್ಗದಲ್ಲಿ  ಶ್ರೀ ಜೆ ಬಿ. ರೆಡ್ಡಿ ಮೊದಲನೇಯ  ಸ್ಥಾನ  , ಶ್ರೀ ಪಿ. ಎಂ. ಸೂರ್ಯ ವಂಶಿ, ಎರಡನೇಯ  ಹಾಗೂ ಶ್ರೀ ವಿ .ರಾಮನ್ ಮೂರನೇಯ ಸ್ಥಾನವನ್ನು ಪಡೆದಿದ್ದಾರೆ .

ಈ ಕಾರ್ಯಕ್ರಮದಲ್ಲಿ  ಶ್ರೀಮತಿ ಮೀರಾದತ್ತ  ಮುಖ್ಯ  ಪೋಸ್ಟ್  ಮಾಸ್ಟರ್ ಜನರಲ್, ಕರ್ನಾಟಕ ವಲಯ , ಶ್ರೀ ಎಸ್ .ಸಿ. ಸರ್ಮಾ, ಮುಖ್ಯ ಜನರಲ್ ಮ್ಯಾನೇಜರ್, ಅಂಚೆ ಜೀವ ವಿಮೆ ನಿರ್ದೇಶನಾಲಯ ಹಾಗು ಅಂಚೆ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು .

*******

ಪಚ : ಪಾ: ಆ:ಕ : ಬೆಂ : 18 : 00 08–11–2005